**SC No. 29/2025**
**PW-5**
**CW-5**

ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ: 57)
ನಮೂನೆ ಸಂಖ್ಯೆ: 4

## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇವರ ನ್ಯಾಯಾಲಯದಲ್ಲಿ, ಬೆಳಗಾವಿ.

## ಎಸ್.ಸಿ ನಂ: **29/2025**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಐಶ್ವರ್ಯ ಕಾಗಲೆ | ಪ್ರಾಸಾ: 5 |
| ತಂದೆಯ ಹೆಸರು | : | ಅನೀಲ ಕಾಗಲೆ | ಚಾಸಾ: 5 |
| ವಯಸ್ಸು | : | 24 ವರ್ಷ | ದಿನಾಂಕ 09.06.2026 ರಂದು ಸಾಕ್ಷಿದಾರರಿಗೆ ಸತ್ಯಪ್ರತಿಜ್ಞೆಯನ್ನು ಬೋಧಿಸಲಾಯಿತು. |
| ಉದ್ಯೋಗ | : | ಖಾಸಗಿ ನೌಕರಿ | |
| ವಾಸಸ್ಥಳ | : | ಶಹಪೂರ, ಬೆಳಗಾವಿ | |

**ಮುಖ್ಯವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:**

ನನಗೆ ಚಾಸಾ 1 ಮತ್ತು 4 ಇವರ ಪರಿಚಯ ಇದೆ. ನನಗೆ ಚಾಸಾ 6 ರಿಂದ 10 ಇವರ ಪರಿಚಯ ಇರುವುದಿಲ್ಲ. ನನಗೆ ಆರೋಪಿತರ ಪರಿಚಯ ಇರುವುದಿಲ್ಲ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಆರೋಪಿತರು ಮತ್ತು ಚಾಸಾ 1,4, 9 ಮತ್ತು 10 ಇವರ ನಡುವೆ ಗಲಾಟೆಯಾಗಿರುವುದನ್ನು ನಾನು ನೋಡಿಲ್ಲ. ಆರೋಪಿತರು ನನಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ ಮತ್ತು ಹಲ್ಲೆ ಮಾಡಿ ಕೊಲೆ ಬೆದರಿಕೆ ಹಾಕಿಲ್ಲ. ಆರೋಪಿತರು ಈ ಕೃತ್ಯಗಳನ್ನು ಮಾಡಿದ್ದರು ಎಂದು ನಾನು ಯಾವುದೇ ಹೇಳಿಕೆಯನ್ನು ಕೊಟ್ಟಿಲ್ಲ. ಈಗ ನನಗೆ ತೋರಿಸಿದ ಹೇಳಿಕೆಯಲ್ಲಿ ನನ್ನ ಸಹಿ ಇದೆ. ಆ

ಹೇಳಿಕೆಯನ್ನು ನಿ.ಪಿ.13 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.13(ಎ) ಎಂದು ಗುರುತಿಸಲಾಗಿದೆ. ನಿ.ಪಿ.13 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರುತ್ತಾರೆ. ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ಅಭಿಯೋಜನೆಯ ಪರ ಕೇಸಿಗೆ ವ್ಯತಿರಿಕ್ತವಾಗಿ ಸಾಕ್ಷಿ ನುಡಿಯುವುದು ಕಂಡುಬರುತ್ತದೆ, ಈ ಕಾರಣದಿಂದ ಮಾನ್ಯ ಅಭಿಯೋಜಕರ ಕೋರಿಕೆಯನ್ನು ಮನ್ನಿಸಿ, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಪಾಟೀಸವಾಲಿಗೆ ಒಳಪಡಿಸಲು ಅನುಮತಿ ನೀಡಲಾಗಿದೆ.)

ಪಾಟೀ ಸವಾಲುಃ ಸರ್ಕಾರದ ಪರ ಮಾನ್ಯ ಅಭಿಯೋಜಕರಿಂದಃ

2. ದಿನಾಂಕ 23.05.2024 ರಂದು ಸಂಜೆ 05.30 ಗಂಟೆಗೆ ಚಾಸಾ 9 ಮತ್ತು 10 ರವರು ಅವರ ಗೆಳೆಯರೊಂದಿಗೆ ಶಹಪೂರದ ಅಳವನಗಲ್ಲಿಯಲ್ಲಿರುವ ಮರಾಠಿ ಶಾಲೆಯ ಬಳಿ ಕ್ರಿಕೇಟ ಆಡುತ್ತಿದ್ದ ಕಾಲಕ್ಕೆ ಆರೋಪಿತರು ಅಲ್ಲಿ ಬಂದು ಅವರೊಂದಿಗೆ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದು ಆರೋಪಿತರು ಚಾಸಾ 9 ಮತ್ತು 10 ರವರಿಗೆ ಕೈಗಳಿಂದ, ಕಲ್ಲಿನಿಂದ ಮತ್ತು ವಿಕೇಟಿನಿಂದ ಹೊಡೆದು ಹಲ್ಲೆ ಮಾಡಿದ್ದರು ಎನ್ನುವುದು ನಿಜವಲ್ಲ. ಈ ಘಟನೆಯ ವಿಷಯ ತಿಳಿದು ನಾನು, ಚಾಸಾ 1 ಮತ್ತು 4 ರವರು ಸ್ಥಳಕ್ಕೆ ಹೋದಾಗ ಆರೋಪಿತರು ನನಗೆ ಕತ್ತಿಯಿಂದ ಹೊಡೆದು ಹಲ್ಲೆ ಮಾಡಿದ್ದರು ಮತ್ತು ಚಾಸಾ 4 ರವರಿಗೆ ಎಳೆದಾಡಿ ಆಕೆಯ ಮಾನಭಂಗ ಮಾಡಿದ್ದರು ಎನ್ನುವುದು ನಿಜವಲ್ಲ. ಬಳಿಕ ಆರೋಪಿತರು ನನಗೆ ಮತ್ತು ಚಾಸಾ 1, 4 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಕೊಲೆ ಬೆದರಿಕೆ ಹಾಕಿದ್ದರು ಎನ್ನುವುದು ನಿಜವಲ್ಲ.

3. ದಿ.21.06.2024 ರಂದು ಈ ಘಟನೆಯ ಸಂಬಂಧ ನಾನು ಬೆಳಗಾವಿ ಜೆ.ಎಮ್.ಎಫ್.ಸಿ. ನ್ಯಾಯಾಲಯದ ಮುಂದೆ ಹಾಜರಾಗಿ ನಿ.ಪಿ. 13 ರಂತೆ ಒಂದು ಹೇಳಿಕೆಯನ್ನು ಕೊಟ್ಟಿದ್ದೆ ಎನ್ನುವುದು ನಿಜವಲ್ಲ. ದಿ.25.05.2024 ರಂದು ನಾನು ಶಹಪೂರ ಪೋಲಿಸರ ಮುಂದೆ ನಿ.ಪಿ. 14 ರಂತೆ ಒಂದು ಹೇಳಿಕೆಯನ್ನು ಕೊಟ್ಟಿದ್ದೆ

ಎನ್ನುವುದು ನಿಜವಲ್ಲ. ಈಗ ನಾವು ಮತ್ತು ಆರೋಪಿತರು ರಾಜಿ ಮಾಡಿಕೊಂಡಿದ್ದೇವೆ ಎನ್ನುವುದು ನಿಜ. ಆ ಕಾರಣಕ್ಕಾಗಿ ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎನ್ನುವುದು ನಿಜವಲ್ಲ.

ಪಾಟೀ ಸವಾಲುಃ ಆರೋಪಿತರ ಪರವಾಗಿಃ ಶ್ರೀ ಎಸ್ ಎನ್ ಪಿ ವಕೀಲರಿಂದಃ

ಆರೋಪಿ ಪರ ವಕೀಲರು ಇಲ್ಲ ಎಂದು ಹೇಳುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ,

(ಮಂಜುನಾಥ ನಾಯಕ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬೆಳಗಾವಿ.